ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY

Office of the Registrar Evaluation, Jnana Jyothi Central College Campus, Dr Ambedkar Veedhi, Bengaluru – 560001
Ph: 080-22295559/29572003 Mail: registrarevlubcu@gmail.com/regev@bcu.ac.in

ಸಂಖ್ಯೆ: ಬೆಂ.ನ.ವಿ/ಪ.ವಿ/01/ಮೂ.ವಾ.ಘ/2024-25 /491 ದಿನಾಂಕ: 22.06.2024

ಗೆ,

ಎಲ್ಲಾ ಪ್ರಥಮ ರ್‍ಯಾಂಕ್ ವಿಜೇತರು ಮತ್ತು
ಚಿನ್ನದ ಪದಕ ವಿಜೇತರು ಹಾಗೂ ಪಿಹೆಚ್.ಡಿ.
ಪದವಿ ಪಡೆಯಲಿರುವ ಸಂಶೋಧನಾ ವಿದ್ಯಾರ್ಥಿಗಳಿಗೆ
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು – 560001

ಮಾನ್ಯರೇ,

ವಿಷಯ: **ಮೂರನೇ ವಾರ್ಷಿಕ ಘಟಿಕೋತ್ಸವಕ್ಕೆ ಚಿನ್ನದ ಪದಕ / ಬಹುಮಾನ / ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಹಾಗೂ ಪಿಹೆಚ್.ಡಿ. ಪದವಿ ಪಡೆಯಲಿರುವ ಸಂಶೋಧನಾ ವಿದ್ಯಾರ್ಥಿಗಳಿಗೆ ಆಹ್ವಾನ ಪತ್ರಿಕೆ / ಬ್ಯಾಡ್ಜ್ ಪಡೆಯುವ ಬಗ್ಗೆ.**

******

ಮೇಲ್ಕಂಡ ವಿಷಯದ ಬಗ್ಗೆ ಈ ಮೂಲಕ ತಮಗೆ ತಿಳಿಸುವುದೇನೆಂದರೆ, ಮೂರನೇ ವಾರ್ಷಿಕ ಘಟಿಕೋತ್ಸವವು ದಿನಾಂಕ 29.06.2024 ರಂದು ಶನಿವಾರದಂದು, ಜ್ಞಾನಜ್ಯೋತಿ ಸಭಾಂಗಣ, ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – 560 001 ಇಲ್ಲಿ ಬೆಳಗ್ಗೆ 11:30 ಘಂಟೆಗೆ ನಡೆಯಲಿದ್ದು ಈ ಸಂಬಂಧವಾಗಿ ಚಿನ್ನದ ಪದಕ / ಪ್ರಥಮ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಆಮಂತ್ರಣ ಪತ್ರಿಕೆ ಮತ್ತು ಬ್ಯಾಡ್ಜುಗಳನ್ನು ಈ ಕೆಳಗಿನ ದಿನಾಂಕದಂದು ವಿತರಿಸಲಾಗುವುದು. **ಚಿನ್ನದ ಪದಕ / ಪ್ರಥಮ ರ್‍ಯಾಂಕ್ ವಿಜೇತ ವಿದ್ಯಾರ್ಥಿ ಹಾಗೂ ಪಿಹೆಚ್.ಡಿ. ಪದವಿ ಪಡೆಯಲಿರುವ ಸಂಶೋಧನಾ ವಿದ್ಯಾರ್ಥಿಯಾ ಒಬ್ಬ ಪೋಷಕರಿಗೆ ಮಾತ್ರ ಮೂರನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಪ್ರವೇಶವಿರುತ್ತದೆ.** ಆಮಂತ್ರಣ ಪತ್ರಿಕೆ ಮತ್ತು ಬ್ಯಾಡ್ಜುಗಳನ್ನು ದಿನಾಂಕ 25.06.2024 ರಂದು ಕಛೇರಿ ವೇಳೆಯಲ್ಲಿ ಕುಲಸಚಿವರು (ಮೌಲ್ಯಮಾಪನ) ಕಛೇರಿ (Stone Building), 2ನೇ ಮಹಡಿ, ಕೊಠಡಿ ಸಂಖ್ಯೆ 2ರಲ್ಲಿ (ಪ್ರಾಂಶುಪಾಲರು ನೀಡಿರುವ ಗುರುತಿನ ಪತ್ರದೊಂದಿಗೆ) ಖುದ್ದಾಗಿ ಬಂದು ಪಡೆಯಲು ಹಾಗೂ ಆ ದಿನ ಮಧ್ಯಾಹ್ನ 02.00 ಘಂಟೆಗೆ ಘಟಿಕೋತ್ಸವದ ಸಿದ್ಧತೆಯ (Rehearsal) ಪೂರ್ವಭ್ಯಾಸ ನಡೆಯಲಿದ್ದು, ಚಿನ್ನದ ಪದಕ ವಿಜೇತರು ಮತ್ತು ಪ್ರಥಮ ರ್‍ಯಾಂಕ್ ವಿಜೇತರು ಹಾಗೂ ಪಿಹೆಚ್.ಡಿ. ಪದವಿ ಪಡೆಯಲಿರುವ ಸಂಶೋಧನಾ ವಿದ್ಯಾರ್ಥಿಗಳಿಗೆ ಪೂರ್ವ ಸಿದ್ಧತಾ ಕಾರ್ಯಕ್ರಮದ (Rehearsal) ಪೂರ್ವಭ್ಯಾಸದಲ್ಲಿ ತಪ್ಪದೇ ಭಾಗವಹಿಸಲು ಈ ಮೂಲಕ ತಿಳಿಸಲಾಗಿದೆ.

ದಿನಾಂಕ 29.06.2024 ರಂದು ತಾವು ಘಟಿಕೋತ್ಸವ ಸಮಾರಂಭಕ್ಕೆ ಆಗಮಿಸುವಾಗ ತಮ್ಮ ಕಾಲೇಜಿನ ಪ್ರಾಂಶುಪಾಲರು ನೀಡಿರುವ ಗುರುತಿನ ಪತ್ರವನ್ನು ತಪ್ಪದೆ ತರತಕ್ಕದ್ದು. ಘಟಿಕೋತ್ಸವಕ್ಕೆ ಆಗಮಿಸುವ ಎಲ್ಲಾ ಚಿನ್ನದ ಪದಕ / ಪ್ರಥಮ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳು ಹಾಗೂ ಪಿಹೆಚ್.ಡಿ. ಪದವಿ ಪಡೆಯಲಿರುವ ಸಂಶೋಧನಾ ವಿದ್ಯಾರ್ಥಿಯು ಬೆಳಗ್ಗೆ 9:00 ಘಂಟೆಯೊಳಗೆ ಘಟಿಕೋತ್ಸವ ನಡೆಯುವ ಜ್ಞಾನಜ್ಯೋತಿ ಸಭಾಂಗಣದ ಒಳಗೆ ಹಾಜರಿರಬೇಕೆಂದು ಕೋರಲಾಗಿದೆ. ಬೆಂಗಳೂರು ನಗರ ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ ಖಾದಿ ಅಥವಾ ಹ್ಯಾಂಡ್ಲೂಮ್ಸ್‌ನ ಬಿಳಿಯ ಬಣ್ಣದ ಉಡುಪುಗಳನ್ನು ಧರಿಸಿ ಹಾಜರಾಗತಕ್ಕದ್ದು.

ಕುಲಸಚಿವರು (ಮೌಲ್ಯಮಾಪನ)

**ಕುಲಸಚಿವರು (ಮೌಲ್ಯಮಾಪನ)**
**ಬೆಂಗಳೂರು ನಗರ ವಿಶ್ವವಿದ್ಯಾನಿಲಯ**
**ಸೆಂಟ್ರಲ್ ಕಾಲೇಜು ಕ್ಯಾಂಪಸ್**
**ಬೆಂಗಳೂರು – 560 001**

ಸೂಚನೆ:

1. ಮೂರನೇ ಘಟಿಕೋತ್ಸವ ಸಮಾರಂಭಕ್ಕೆ ಆಗಮಿಸುವ ಎಲ್ಲಾ ವಿದ್ಯಾರ್ಥಿಗಳು ಆಹ್ವಾನ ಪತ್ರಿಕೆಯಲ್ಲಿರುವ ನಿಯಮಗಳನ್ನು ಪಾಲಿಸತಕ್ಕದ್ದು.
2. ಚಿನ್ನದ ಪದಕ / ಪ್ರಥಮ ರ್‍ಯಾಂಕ್ ವಿಜೇತ ವಿದ್ಯಾರ್ಥಿ ಹಾಗೂ ಪಿಹೆಚ್.ಡಿ. ಪದವಿ ಪಡೆಯಲಿರುವ ಸಂಶೋಧನಾ ವಿದ್ಯಾರ್ಥಿಗಳು ಘಟಿಕೋತ್ಸವದ ಸಮಾರಂಭಕ್ಕೆ ಒಬ್ಬ ಪೋಷಕರ ಜೊತೆ ಹಾಜರಾಗಬಹುದು.
3. ಘಟಿಕೋತ್ಸವದ ಸಮಾರಂಭಕ್ಕೆ ಪ್ಯಾಲೆಸ್ ರಸ್ತೆ ಪ್ರವೇಶದ್ವಾರದಿಂದ ಪ್ರವೇಶ ಮಾಡುವುದು ಹಾಗೂ ತಮ್ಮ ವಾಹನಗಳನ್ನು ಗ್ರಂಥಾಲಯ, ಸಿ.ಬಿ.ಎಸ್.ಎಂ.ಎಸ್ ವಿಭಾಗ, ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್, ಪ್ಯಾಲೇಸ್ ರಸ್ತೆ, ಇಲ್ಲಿ ನಿಲ್ಲಿಸತಕ್ಕದ್ದು.
4. ಘಟಿಕೋತ್ಸವಕ್ಕೆ ಹಾಜರಾಗಲು ಸಾಧ್ಯವಾಗದ ವಿದ್ಯಾರ್ಥಿಗಳು ಮುಂಚಿತವಾಗಿ ರಿಜಿಸ್ಟ್ರಾರ್ (ಮೌಲ್ಯಮಾಪನ) ಗೆ ತಿಳಿಸಬೇಕು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY

Office of the Registrar Evaluation, Jnana Jyothi Central College Campus, Dr Ambedkar Veedhi, Bengaluru – 560001
Ph: 080-22295559/29572003 Mail: registrarevlubcu@gmail.com/regev@bcu.ac.in

No.: BCU/Ex.Br./01/3rd A.C./2024-25 / 492 Date: 22.06.2024

**To,**
All the First Rank Holders,
Gold Medal Winners and
Ph.D. Awarded Students
Bengaluru City University,
Bengaluru – 560001.

**Sub:** Inviting the First Rank Holders, Gold Medal winners and Ph.D. Awarded Students for the 3rd Annual Convocation of Bengaluru City University to collect Invitation & Badges.

******

The Third Annual Convocation is going to be held on Saturday, 29th of June 2024 at 11:30 am at Jnana Jyothi Auditorium, Jnana Jyothi Central College Campus, Bengaluru City University, Bengaluru - 560001. In this regard all the First Rank holders, Gold Medal Winners and Ph.D. Awarded Students are hereby informed to collect their Invitations and Badges in person (Bring College issued I.D. Card at the time of collecting invitation and Badges) from office of the Registrar (Evaluation), Jnana Jyothi Central College Campus, Bengaluru City University Bengaluru on 25.06.2024 during office hours. First Rank holders and Gold Medal winners can attend the Convocation with one parent or guardian.

The Convocation Rehearsal will be on same day at 2.00 pm the Gold Medal winner, First Rank holders and Ph.D. Awarded Students are required to be attend the Rehearsal without fail.

In order to attend the 3rd Annual Convocation, First Rank holders, Gold Medal winners and Ph.D. Awarded Students must bring their College ID with them. The Students should report to the Convocation venue before 9:00 am at Jnana Jyothi Auditorium. As per Bengaluru City University Regulation, the Students should wear white colored Khadi or Handloom attire for attending the Annual Convocation.

**Registrar (Evaluation)**

**Registrar (Evaluation)**

**P.T.O.**

**Instructions:**

1. All the Students who are invited for 3rd Annual Convocation must follow the instructions stated in the Invitation.
2. First Rank holders, Gold Medal winners and Ph.D. Awarded Students can attend the Convocation only with their one parent or guardian.
3. The visitors vehicle must enter from Palace Road facing entrance and Parking must be done near Library, Jnana Jyothi Central College Campus, Palace Road.
4. Those students who will not be able to attend Convocation must inform the Registrar (Evaluation) in advance.